


بسم اللهِ الرّحمٰن الرّحيم

# ಜಲ್ಸಾ ಸಾಲಾನ ಯು.ಕೆ. 2023: ಮಾರ್ಗದರ್ಶನ ಮತ್ತು ಸಲಹೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಹದೀಖತುಲ್ ಮಹ್‌ದಿ'**ಯಿಂದ **28–07–2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಇಂದು ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಜಮಾಅತ್ ಯು.ಕೆ.ಯ ವಾರ್ಷಿಕ ಜಲ್ಸ ಆರಂಭವಾಗುತ್ತಿದೆ. ಖಿಲಾಫತಿನ ಇರುವಿಕೆಯೊಂದಿಗೆ ಸುಮಾರು ನಾಲ್ಕು ದಶಕಗಳಿಂದ ಇಲ್ಲಿ ವಾರ್ಷಿಕ ಜಲ್ಸಗಳು ನಡೆಯುತ್ತಾ ಇವೆ. ಆರಂಭದಲ್ಲಿ ವಿಸ್ತಾರವಾದ ಏರ್ಪಾಡುಗಳನ್ನು ಮಾಡಬೇಕಾದ ಕಾರಣದಿಂದ ಇಲ್ಲಿಯ ಜಮಾಅತಿಗೆ ಬಹಳಷ್ಟು ಕಲಿಯುವ ಆವಶ್ಯಕತೆ ಇತ್ತು. ಅದಕ್ಕಾಗಿ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ರಹ್ಮಹುಲ್ಲಾಹ್ ಸ್ವತಃ ಆಸಕ್ತಿಯಿಂದ ಮಾರ್ಗದರ್ಶನ ಮಾಡಿದರು ಮತ್ತು ರಬ್ವದಿಂದಲೂ ಜನರನ್ನು ಕರೆಸಿಕೊಂಡು ಇಲ್ಲಿಯ ಜನರಿಗೆ ಕೆಲಸಗಳನ್ನು ಕಲಿಸಿಕೊಟ್ಟರು. ರಬ್ವದಿಂದ ಬಂದವರಲ್ಲಿ ಜಲ್ಸ ಸಾಲಾನ ಆಫೀಸರ್ ಆದ ಸನ್ಮಾನ್ಯ ಚೌಧರಿ ಹಮೀದುಲ್ಲಾಹ್ ಸಾಹಿಬ್ ಕೂಡ ಇದ್ದರು. ಅವರು ಬಹಳಷ್ಟು ನೆರವು ನೀಡಿದರು. ಇಲ್ಲಿ 1985ರಲ್ಲಿ ಖಿಲಾಫತಿನ ಅಧೀನದಲ್ಲಿ ಮೊದಲ ಜಲ್ಸ ನಡೆಯಿತು. ಅದಕ್ಕಿಂತ ಮೊದಲು 1984ರಲ್ಲೂ ಇಲ್ಲಿ ಜಲ್ಸ ನಡೆದಿತ್ತಾದರೂ ಅದು ಬಹಳ ಕಿರಿದಾಗಿತ್ತು. 1985ರಲ್ಲಿ ಬಹುಶಃ ಐದು ಸಾವಿರ ಜನರು ಭಾಗವಹಿಸಿದ್ದರು. ಈ ಎಲ್ಲ ಏರ್ಪಾಡನ್ನು ಹೇಗೆ ನಿರ್ವಹಿಸುವುದು ಎಂದು ವ್ಯವಸ್ಥಾಪಕರಿಗೆ ಅಂದು ಚಿಂತೆಯಿತ್ತು. ಈಗಂತು ಶಾಖಾ ಸಂಘಟನೆಗಳ ಇಜ್ತಿಮಗಳಲ್ಲಿ ಅದಕ್ಕಿಂತ ಅನೇಕ ಪಟ್ಟು ಹಾಜರಿ ಇರುತ್ತದೆ ಮತ್ತು ಶಾಖಾ ಸಂಘಟನೆಗಳು ಬಹಳ ಉತ್ತಮ ರೀತಿಯಲ್ಲಿ ಎಲ್ಲ ಏರ್ಪಾಡನ್ನು ಸ್ವತಃ ನಿರ್ವಹಿಸುತ್ತವೆ. ಈ ಮಟ್ಟದಲ್ಲಿ ಈಗ ಯು.ಕೆ.ಯ ಜಮಾಅತ್ ಬಹಳಷ್ಟು ಅನುಭವ ಪಡೆದುಕೊಂಡಿದೆ. ಆದರೂ ಈಗ ಮೂರು ನಾಲ್ಕು ವರ್ಷಗಳ ನಂತರ ಪೂರ್ಣ ಪ್ರಮಾಣದಲ್ಲಿ ಜಲ್ಸ ಪುನಃ ಜರುಗುತ್ತಿರುವ ಕಾರಣದಿಂದ ನಲ್ವತ್ತು ಸಾವಿರಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಹಾಜರಾಗಬಹುದಾದ ಜನರನ್ನು ಹೇಗೆ ಉತ್ತಮ ರೀತಿಯಲ್ಲಿ ನಿಭಾಯಿಸುವುದು ಎಂಬುದರ ಬಗ್ಗೆ ವ್ಯವಸ್ಥಾಪಕರು ಸ್ವಲ್ಪ ಚಿಂತಿತರಾಗಿರುವರು. ಆದರೆ ಅಲ್ಲಾಹನ ಅನುಗ್ರಹದಿಂದ ಇಲ್ಲಿಯ ಕಾರ್ಯಕರ್ತರು ಬಹಳ ಉತ್ತಮ ರೀತಿಯಲ್ಲಿ ಎಲ್ಲ ಏರ್ಪಾಡುಗಳನ್ನು ನಿರ್ವಹಿಸುವರು ಎಂಬ ಪ್ರತೀಕ್ಷೆ ನನಗೆ ಇದೆ.

ಕಳೆದ ರವಿವಾರ ನಾನು ಅಂದಿನ ವರೆಗಿನ ಕೆಲಸಗಳ ಅವಲೋಕನ ನಡೆಸಿದ್ದೆ. ಅಲ್ಲಾಹನ ಅನುಗ್ರಹದಿಂದ ಪ್ರತಿಯೊಂದು ವಿಭಾಗದಲ್ಲೂ ಕಾರ್ಯಕರ್ತರು ಬಹಳ ಕ್ರಿಯಾಶೀಲರಾಗಿ ಮತ್ತು ಕೆಲಸಗಳನ್ನು ಚೆನ್ನಾಗಿ ಅರಿಯುವವರನ್ನಾಗಿ ನಾನು ಕಂಡೆನು. ಆ ಸಮಯದಲ್ಲಿ ಇದ್ದ ಚಿಂತೆಗಳನ್ನು ಅಲ್ಲಾಹನು ದೂರಮಾಡಿದನು. ನಾವು ಅಲ್ಲಾಹನ ಅನುಗ್ರಹಗಳನ್ನು ಸ್ವೀಕಾರ ಮಾಡುವವರಾದರೆ ಅವನು ನಮ್ಮ ಚಿಂತೆಗಳನ್ನು ಸದಾ ದೂರ ಮಾಡುವನು. ನಮ್ಮ ಕೆಲಸಗಳು ನಮ್ಮ ಯಾವುದೇ ಸಾಮರ್ಥ್ಯ ಅಥವಾ ಅನುಭವಗಳಿಂದ ಈಡೇರುವುದಿಲ್ಲ. ಬದಲಾಗಿ ಅಲ್ಲಾಹನ ಅನುಗ್ರಹದಿಂದ ಮಾತ್ರ ಈಡೇರಲ್ಪಡುತ್ತವೆ.

ಪರಿಶ್ರಮ, ಉನ್ನತ ಸ್ವಭಾವಗುಣಗಳು ಮತ್ತು ಪ್ರಾರ್ಥನೆಗಳ ಮೂಲಕ ಅಲ್ಲಾಹನಿಂದ ಸಹಾಯ ಪಡೆಯುತ್ತಾ ಪ್ರತಿಯೊಬ್ಬ ಕಾರ್ಯಕರ್ತ ಮತ್ತು ಪ್ರತಿಯೊಬ್ಬ ಮೇಲ್ನೋಟಗಾರ ತಮ್ಮ ಕೆಲಸಗಳನ್ನು ಮಾಡಬೇಕು ಎಂದು ಕಳೆದ ಖುತ್ಬದಲ್ಲೂ ನಾನು ಕಾರ್ಯಕರ್ತರ ಗಮನ ಸೆಳೆದಿದ್ದೆ. ಪುನಃ ನಾನು ಕಾರ್ಯಕರ್ತರೊಡನೆ ಹೇಳುತ್ತೇನೆ. ನೀವು ಎಲ್ಲರೂ ಯಾವ ಉತ್ಸಾಹದಿಂದ ಸ್ವತಃ ಈ ಸೇವೆಗಾಗಿ ತಮ್ಮನ್ನು ಅರ್ಪಿಸಿದ್ದೀರೋ ಅದೇ ಆವೇಶವನ್ನು ನೆಲೆನಿಲ್ಲಿಸುತ್ತಾ ಡ್ಯೂಟಿ ಇರುವಷ್ಟು ದಿನಗಳು ಈ ಸೇವೆಯನ್ನು ಮಾಡುತ್ತಿರಿ. ಅದೇ ರೀತಿಯಲ್ಲಿ ಡ್ಯೂಟಿಗಳ ಜೊತೆ ಜೊತೆಗೆ ನಾವು ಅಲ್ಲಾಹನ ಆರಾಧನೆಯ ಹಕ್ಕನ್ನು ಕೂಡ ಈಡೇರಿಸಬೇಕು ಎಂಬುದನ್ನು ಗಮನದಲ್ಲಿಡಬೇಕು. ತಮ್ಮ ನಮಾಝುಗಳ ಬಗ್ಗೆ ಗಮನವಿರಬೇಕು. ಸ್ವಂತ ಆತ್ಮವನ್ನು ಪರಿಶುದ್ಧಗೊಳಿಸಲು ಪ್ರಯತ್ನಿಸಬೇಕು.

ಅದೇ ರೀತಿಯಲ್ಲಿ ಜಲ್ಸಗಾಗಿ ಆಗಮಿಸಿರುವ ಅತಿಥಿಗಳೊಡನೆ ಸಹ ಇಂದು ನಾನು ಕೆಲವು ಮಾತುಗಳನ್ನು ಹೇಳಲು ಬಯಸುತ್ತೇನೆ. ಮೊತ್ತ ಮೊದಲನೆಯದಾಗಿ ಈ ಜಲ್ಸ ಯಾವುದೇ ಲೌಕಿಕ ಮೇಳವಲ್ಲ ಎಂಬ ಹಝ್ರತ್ ಮಸೀಹ್ ಮೌಊದ್[(ಅ)]ರ ಮುಖ್ಯವಾದ ಮಾತನ್ನು ಜಲ್ಸದಲ್ಲಿ ಭಾಗವಹಿಸುವ ಎಲ್ಲರೂ ಸದಾ ನೆನಪಿನಲ್ಲಿಡಬೇಕು. ಈ ಜಲ್ಸದಲ್ಲಿ ಭಾಗಿಯಾಗಲು ನಮಗೆ ಒಂದು ಉದ್ದೇಶವಿದೆ. ಆ ಉದ್ದೇಶವೇನೆಂದರೆ, ನಾವು ನಮ್ಮ ಜ್ಞಾನಪರವಾದ, ಆಧ್ಯಾತ್ಮಿಕವಾದ ಮತ್ತು ನೈತಿಕವಾದ ಸ್ಥಿತಿಗಳನ್ನು ಉತ್ತಮಗೊಳಿಸಬೇಕು ಹಾಗೂ ಅಲ್ಲಾಹ್ ಮತ್ತು ಹಝ್ರತ್ ಪೈಗಂಬರ್[(ಸ)]ರೊಡನೆ ಪ್ರೀತಿಯನ್ನು ಉಂಟುಮಾಡಬೇಕು ಎಂದಾಗಿದೆ. ಈ ಸಂಗತಿಗಳ ಕಡೆಗೆ ಗಮನವಿದ್ದರೆ ಜಲ್ಸದ ಏರ್ಪಾಡುಗಳಲ್ಲಿ ಕೆಲವು ಸಾಮಾನ್ಯ ಕೊರತೆಗಳು ಇದ್ದರೂ ಸಹ ಆ ಕಡೆಗೆ ನಮ್ಮ ಗಮನ ಹೋಗದು.

ಜಲ್ಸದ ಸಮಯಗಳಲ್ಲಿ ಅಲ್ಲಿಲ್ಲಿ ಸುತ್ತಾಡುವುದಕ್ಕೆ ಬದಲಾಗಿ ಜಲ್ಸದ ಕಾರ್ಯಕ್ರಮಗಳಲ್ಲಿ ಭಾಗವಹಿಸಿಕೊಂಡು ಪೂರ್ಣ ಶ್ರದ್ಧೆಯಿಂದ ಜಲ್ಸದ ಕಾರ್ಯಕ್ರಮಗಳನ್ನು ಆಲಿಸಬೇಕು ಎಂಬ ಸಂಗತಿಯನ್ನು ಜಲ್ಸದಲ್ಲಿ ಭಾಗವಹಿಸುವ ಎಲ್ಲರೂ ಖಚಿತಪಡಿಸಬೇಕು. ಕಾರ್ಯಕ್ರಮಗಳ ನಡುವೆ ಇರುವ

ವಿರಾಮದ ವೇಳೆ ಲಭಿಸುವ ಸಮಯವನ್ನು ಸಹ ಉತ್ತಮ ರೀತಿಯಲ್ಲಿ ಉಪಯೋಗಿಸಿರಿ. ಮಾರುಕಟ್ಟೆಯಲ್ಲಿ ಖರೀದಿ ಮಾಡಲಿಕ್ಕಾಗಿ ಸುತ್ತಾಡಬೇಡಿರಿ. ಬದಲಾಗಿ ಪುಸ್ತಕಗಳ ಸ್ಟಾಲಿಗೆ ಹೋಗಿರಿ, ಕೇಂದ್ರದ ವಿಭಾಗಗಳು ಮುಂತಾದವರ ಪ್ರದರ್ಶನಗಳನ್ನು ನೋಡಿರಿ. ತಮ್ಮ ಧಾರ್ಮಿಕ ಮತ್ತು ಇತಿಹಾಸಕ್ಕೆ ಸಂಬಂಧಪಟ್ಟ ಅರಿವನ್ನು ವರ್ಧಿಸಿರಿ. ಇಷ್ಟು ದೊಡ್ಡ ತಾತ್ಕಾಲಿಕ ವ್ಯವಸ್ಥೆಯಲ್ಲಿ ಕೊರತೆಗಳು ಹೇಗಿದ್ದರೂ ಇರುತ್ತವೆ. ಆದ್ದರಿಂದ ಅವುಗಳನ್ನು ಕಡೆಗಣಿಸಬೇಕು. ಉದಾಹರಣೆಗೆ ಊಟದ ವ್ಯವಸ್ಥೆಯನ್ನೇ ತೆಗೆಯಿರಿ. ಸಮಯಕ್ಕೆ ಸರಿಯಾಗಿ ಊಟ ಮಾಡಲು ನೀವು ತಲುಪದಿದ್ದರೆ ಅನಂತರ ಲಭಿಸಿದ್ದನ್ನು ತಿನ್ನಬೇಕು. ರೊಟ್ಟಿ ಸ್ವಲ್ಪ ಬೇಯದೇ ಇದ್ದರೆ ಅಥವಾ ಕರಿದು ಹೋಗಿದ್ದರೆ, ಅದನ್ನು ತಿನ್ನಲು ಸಾಧ್ಯವಾಗದ ಸ್ಥಿತಿಯಲ್ಲಿದ್ದರೆ ಮಾತ್ರ ಬಿಟ್ಟುಬಿಡಬಹುದು. ಇಲ್ಲದಿದ್ದರೆ ತಿನ್ನಬೇಕು. ಟ್ರಾಫಿಕ್ ವ್ಯವಸ್ಥೆಗಳಲ್ಲಿ ಕೆಲವು ದೂರುಗಳು ಬರುತ್ತವೆ. ಅದರಲ್ಲೂ ವ್ಯವಸ್ಥಾಪಕರೊಂದಿಗೆ ಸಹಕರಿಸಬೇಕು. ಉನ್ನತ ಸ್ವಭಾವಗುಣಗಳನ್ನು ತೋರಿಸುವುದು, ಸದ್ಗುಣಗಳನ್ನು ತೋರಿಸುವುದು, ಪರಸ್ಪರ ಮುಗುಳ್ನಗುತ್ತಾ ಭೇಟಿಯಾಗುವುದು, ಇತರರಿಗಾಗಿ ತ್ಯಾಗ ಮನೋಭಾವವನ್ನು ತೋರಿಸುವುದು ಕೇವಲ ಕಾರ್ಯಕರ್ತರ ಕೆಲಸವಲ್ಲ. ಬದಲಾಗಿ ಅತಿಥಿಗಳು ಕೂಡ ವಿಶೇಷವಾಗಿ ಅದನ್ನು ಪ್ರಕಟಿಸಬೇಕು. ಸ್ವಭಾವ ಸರಿಯಿಲ್ಲದಿದ್ದರೆ ಏನೂ ಇಲ್ಲದಂತೆ. ಮುಗುಳ್ನಗುವುದು ಕೂಡ ಸತ್ಯವಿಶ್ವಾಸದ ಭಾಗವಾಗಿದೆ ಮತ್ತು ಸದಖ ಅಗಿದೆ ಎಂದು ನಾನು ಕಳೆದ ಬಾರಿ ಒಂದು ಹದೀಸನ್ನು ಉಲ್ಲೇಖಿಸಿ ಹೇಳಿದ್ದೆ.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಹೃದಯ ಮೃದುವಾಗುವ ತನಕ, ಸ್ವತಃ ಎಲ್ಲರಿಗಿಂತಲೂ ಕೀಳು ಎಂದೂ ಭಾವಿಸುವ ತನಕ ಮತ್ತು ಎಲ್ಲ ದೊಡ್ಡತನಗಳು ದೂರವಾಗುವ ತನಕ ಯಾವನೂ ನಿಜವಾದ ಸತ್ಯವಿಶ್ವಾಸಿಯಾಗಲಾರನು. ಸಮುದಾಯದ ಸೇವಕನಾಗುವುದು ಸಮುದಾಯದ ನಾಯಕನಾಗುವುದಕ್ಕೆ ಇರುವ ಕುರುಹು ಆಗಿದೆ. ಬಡವರೊಡನೆ ಸೌಮ್ಯವಾಗಿ ಮತ್ತು ವಿನಯದಿಂದ ಮಾತನಾಡುವುದು ದೇವನ ಸಂಪ್ರೀತಿಯನ್ನು ಗಳಿಸಿರುವುದಕ್ಕೆ ಇರುವ ಲಕ್ಷಣವಾಗಿದೆ. ಕೆಡುಕನ್ನು ಒಳಿತಿನಿಂದ ಎದುರಿಸುವುದು ಸೌಭಾಗ್ಯದ ಲಕ್ಷಣವಾಗಿದೆ. ಕೋಪವನ್ನು ನಿಯಂತ್ರಿಸುವುದು ಮತ್ತು ಕಹಿಯಾದ ಮಾತನ್ನು ಕೇಳಿ ಸಹಿಸುವುದು ಉನ್ನತ ಮಟ್ಟದ ಧೀರತೆಯಾಗಿದೆ.

ಈ ಮೂರು ದಿನಗಳಲ್ಲಿ ನಾವು ಈ ಮಾತುಗಳನ್ನು ಪಾಲಿಸಿದರೆ, ಇದರ ಅಲ್ಪ ಸ್ವಲ್ಪ ಅಭ್ಯಾಸ ನಮಗೆ ಆಗುವುದು. ತಮ್ಮ ಜೀವಿತದಲ್ಲಿ ಉಳಿದ ದಿನಗಳಲ್ಲೂ ನಾವು ಈ ಸಂಗತಿಗಳನ್ನು ಪಾಲಿಸಲು ಸಾಧ್ಯವಾಗುವುದು. ತನ್ನ ಸಹೋದರನಿಗೆ ತನ್ನ ಮೇಲೆ ಆದ್ಯತೆ ನೀಡುವುದು ಸಾಧಾರಣ ವಿಷಯವಲ್ಲ. ಇದು ಬಹಳ ಪರಿಶ್ರಮದ ಕೆಲಸವಾಗಿದೆ. ಆದ್ದರಿಂದಲೇ ಇದರ ಸಂಬಂಧ ಸತ್ಯವಿಶ್ವಾಸದೊಂದಿಗೆ ಇದೆ ಎಂದು ಹಝ್ರತ್ ಮಸೀಹ್ ಮೌಊದ್[ಅ] ಹೇಳಿದ್ದರು.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಯಾವನಾದರೂ ನನ್ನೊಡನೆ ಕಠಿಣವಾಗಿ ವರ್ತಿಸುವಾಗ ನಾನು ಕೂಡ ಆತನೊಡನೆ ಅದೇ ರೀತಿಯಲ್ಲಿ ವರ್ತಿಸಿದರೆ ನನ್ನ ಸ್ಥಿತಿಯ ಬಗ್ಗೆ ಖೇದವೆಂದೇ ಹೇಳಬಹುದು. ಸತ್ಯದಲ್ಲಿ ನಾನು ಆತನಿಗಾಗಿ ದುಆ ಮಾಡಬೇಕಾಗಿದೆ. ಒಟ್ಟಿನಲ್ಲಿ ಆ ಅಧ್ಯಾಪನೆಗಳು ಮತ್ತು ಇಸ್ಲಾಂ ಸ್ಥಾಪಿಸಲು ಬಯಸುವ ಪರಿಶುದ್ಧ ಸಮಾಜ ಇದೇ ಆಗಿದೆ.

ಸ್ವತಃ ರೋಗಗಳಿಂದ ದೂರವಾಗುವಾಗಲೇ ಇತರರ ರೋಗಗಳ ಚಿಕಿತ್ಸೆ ಮಾಡಲು ಸಾಧ್ಯ. ಎಲ್ಲ ವಿಧದ ಅಹಂಕಾರಗಳನ್ನು ಹೊರಗೆ ಹಾಕಬೇಕು. ಅದರ ಬಗ್ಗೆ ಅತಿಥಿಗಳು ಮತ್ತು ಆತಿಥೇಯರು ಗಮನವಿರಿಸಬೇಕು. ಪರಸ್ಪರ ತಪ್ಪುಗಳನ್ನು ಕಡೆಗಣಿಸಲು ಮತ್ತು ಸಮಾಧಾನದ ವಾತಾವರಣವನ್ನು ಸೃಷ್ಟಿಸಲು ಪ್ರಯತ್ನಿಸುವಾಗ ನಾವು ಯಾವ ಉದ್ದೇಶಕ್ಕಾಗಿ ಇಲ್ಲಿ ಒಟ್ಟುಗೂಡಿದ್ದೇವೆಯೋ ಆ ಉದ್ದೇಶವನ್ನು ಗಳಿಸುವವರಾಗುವೆವು.

ಕೆಲವೊಮ್ಮೆ ಜಗಳ ಕೂಡ ಆಗುತ್ತದೆ. ಕೋಪವನ್ನು ನಿಯಂತ್ರಿಸಲು ಸಾಧ್ಯವಿಲ್ಲವೆಂದಾದರೆ ಜಲ್ಸಗೆ ಬರಬೇಕಾಗಿಲ್ಲ. ಪಾರ್ಕಿಂಗಿಗೆ ಸಂಬಂಧಿಸಿ ಸಹಕರಿಸಿರಿ. ಅಲ್ಲಾಹನ ಸಂಪ್ರೀತಿಗಾಗಿ ಈ ದಿನಗಳು ಕಳೆದರೆ ಮತ್ತು ಸಂತೋಷದಿಂದ ಸಹಿಸಿದರೆ ಅಲ್ಲಾಹನು ಬೇರೆ ಯಾವುದಾದರೂ ಮಾರ್ಗದಿಂದ ದಯಪಾಲಿಸುತ್ತಾನೆ.

ಸಮಾಜದಲ್ಲಿ ಶಾಂತಿ ಮತ್ತು ಸಮಾಧಾನದ ವಾತಾವರಣ ಉಂಟುಮಾಡಲು ಮತ್ತು ಹರಡಲು ನಿರ್ಗತಿಕರಿಗೆ ಊಟ ನೀಡಲು ಹಾಗೂ ಪರಿಚಿತರೊಡನೆ ಮತ್ತು ಅಪರಿಚಿತರೊಡನೆ ಸಲಾಂ ಹೇಳಲು ಹಝ್ರತ್ ಪೈಗಂಬರ್[ಸ] ಹೇಳಿರುವರು. ಕೋಟಿಗಟ್ಟಲೆ ಜನರಿಗೆ ಊಟವಿದ್ದರೆ, ಇರಲು ಮನೆಯಿಲ್ಲ. ಹಸಿದವವನಿಗೆ ಊಟ ನೀಡಲು ಇಸ್ಲಾಂ ಉಪದೇಶಿಸುತ್ತದೆ. ಈ ಸತ್ಯವನ್ನು ಮುಸ್ಲಿಂ ರಾಷ್ಟ್ರಗಳು ಅರಿತುಕೊಂಡು ಈ ಅಸಮಾಧಾನವನ್ನು ದೂರ ಮಾಡಲು ಪ್ರಯತ್ನಿಸಿದರೆ ಎಷ್ಟು ಚೆನ್ನ.

ಹಝ್ರತ್ ಪೈಗಂಬರ್[ಸ] ಸಲಾಂ ಹೇಳಲು ಉಪದೇಶಿಸಿರುವರು. ಸಲಾಂ ಎಂದು ಕೇವಲ ಬಾಯಿಮಾತಾಗಿ ಹೇಳುವುದಲ್ಲ. ಮನುಷ್ಯನು ಮನಸ್ಸಾರೆ ಸಲಾಂ ಹೇಳುವಾಗ ಆತನು ಸಮಾಧಾನವನ್ನು ತಲುಪಿಸಲು ಪ್ರಯತ್ನಿಸುವವನಾಗುತ್ತಾನೆ. ಇತರರ ಕಷ್ಟತೆಗಳನ್ನು ದೂರಮಾಡುವವನಾಗುತ್ತಾನೆ. ಈ ದಿನಗಳಲ್ಲಿ ಪ್ರತಿಯೊಬ್ಬ ಅಹ್ಮದಿ ಸಮಾಧಾನದ ಸಂದೇಶ ತಲಪಿಸಲು, ಸಲಾಮನ್ನು ರೂಢಿಗೊಳಿಸಲು ಪ್ರಯತ್ನಿಸಬೇಕು.

ಯಾವ ಜನರಿಂದ ಪ್ರಯೋಜನ ಲಭಿಸುತ್ತದೋ ಅಥವಾ ಯಾವ ಜನರೊಂದಿಗೆ ಏನಾದರೂ ಸಂಬಂಧ ಇದೆಯೋ ಅಂಥವರೊಡನೆ ಜನರು ಬಹಳ ಉತ್ಸಾಹದಿಂದ ಮಾತನಾಡುತ್ತಾರೆ. ಹೃದಯಗಳ ಹಗೆ ದೂರವಾಗುವಾಗ ಮತ್ತು ಮನಸ್ಸಾರೆ ಇತರರಿಗಾಗಿ ಸಮಾಧಾನದ ಪ್ರಾರ್ಥನೆ ಮಾಡುವಾಗ ಮಾತ್ರ ಯಥಾರ್ಥವಾದ ಶಾಂತಿ ಮತ್ತು ಸಮಾಧಾನ ಉಂಟಾಗುವುದು. ಜಲ್ಸದ ವಾತಾವರಣ ಸಮಾಧಾನದ ವಾತಾವರಣವಾಗಲಿ. ಸೃಷ್ಟಿಗಳ ಹಕ್ಕುಗಳನ್ನು ಈಡೇರಿಸುವುದು ನಮ್ಮ ಜೀವಿತದ ಭಾಗವಾಗಲಿ.

(ಹುಝೂರ್ ಹೇಳಿದರು:) ಜಲ್ಸದ ಕಾರ್ಯಕ್ರಮಗಳನ್ನು ಮೌನವಾಗಿ ಮತ್ತು ಗಮನವಿಟ್ಟು ಆಲಿಸಿರಿ. ಜಲ್ಸದಲ್ಲಿ ಬಂದು ಕುಳಿತುಕೊಳ್ಳಿರಿ. ಕೆಲವು ಭಾಷಣಗಳು ಬಹಳ ಉತ್ತಮವಾಗಿರುವುದರಿಂದ ಕೇಳುವುದು ಮತ್ತು ಕೆಲವನ್ನು ಕೇಳದೇ ಇರುವುದನ್ನು ಹಝ್ರತ್ ಮಸೀಹ್ ಮೌಊದ್(ಅ) ಇಷ್ಟಪಡುತ್ತಿರಲಿಲ್ಲ.

ಜಲ್ಸದ ದಿನಗಳಲ್ಲಿ ದೇವಸ್ಮರಣೆ (ಧಿಕ್‌ರೆ ಇಲಾಹಿ) ಮತ್ತು ದುರೂದ್ ಹೇಳುವುದರ ಕಡೆಗೆ ಗಮನವಿರಲಿ. ಈಗಂತು ಮುಹರ್ರಮಿನ ದಿನಗಳು ಆಗಿವೆ. ಅಲ್ಲಾಹನ ಹೆಸರನ್ನು ಎತ್ತಿಕೊಂಡೇ ಹಝ್ರತ್ ಪೈಗಂಬರ್(ಸ)ರ ಆಧ್ಯಾತ್ಮಿಕ ಮತ್ತು ದೈಹಿಕ ಕುಟುಂಬದ ಮೇಲೆ ದೌರ್ಜನ್ಯ ಮಾಡಲಾಗಿತ್ತು. ಈಗ ಅದೇ ದೌರ್ಜನ್ಯಗಳನ್ನು ಹಝ್ರತ್ ಪೈಗಂಬರ್(ಸ)ರ ಆಧ್ಯಾತ್ಮಿಕ ಕುಟುಂಬ, ಹಝ್ರತ್ ಮಸೀಹ್ ಮೌಊದ್(ಅ) ಮತ್ತು ಅವರ ಜಮಾಅತಿನ ಮೇಲೆ ನಡೆಸಲಾಗುತ್ತಿವೆ. ಇತ್ತೀಚಿಗೆ ಪಾಕಿಸ್ತಾನದಲ್ಲಿ ಬಹಳ ಕಠಿಣವಾದ ಪರಿಸ್ಥಿತಿ ಇದೆ. ಪ್ರವಾದಿ ಪ್ರೇಮದ ಹೆಸರಿನಲ್ಲಿ ಮಾಡುತ್ತಿದ್ದಾರೆ ಎಂದು ಹೇಳಲಾಗುತ್ತಿದೆ. ಸತ್ಯದಲ್ಲಿ ನಮ್ಮ ವಿಶ್ವಾಸದ ಬುನಾದಿಯೇ ಹಝ್ರತ್ ಪೈಗಂಬರ್(ಸ)ರ ಮೇಲೆ, ಅವರು ಖಾತಮುನ್ನಬಿಯ್ಯೀನ್ ಆಗಿರುವುದರ ಮೇಲೆ ಮತ್ತು ಅವರು ತಂದ ಶರೀಅತಿನ ಮೇಲೆ ಆಗಿದೆ. ಹಝ್ರತ್ ಪೈಗಂಬರ್(ಸ)ರ ಆದೇಶವನ್ನು ಅಂಗೀಕರಿಸುತ್ತಾ ನಾವು ಹಝ್ರತ್ ಮಸೀಹ್ ಮೌಊದ್(ಅ)ರನ್ನು ನಂಬಿದ್ದೇವೆ. 'ನನಗೆ ಲಭಿಸಿದ್ದೆಲ್ಲವೂ ಹಝ್ರತ್ ಪೈಗಂಬರ್(ಸ)ರೊಂದಿಗೆ ಇರಿಸಿದ ಪ್ರೇಮದಿಂದ ಆಗಿವೆ' ಎಂದು ಹಝ್ರತ್ ಮಸೀಹ್ ಮೌಊದ್(ಅ) ಅನೇಕ ಕಡೆಗಳಲ್ಲಿ ಹೇಳಿರುವರು.

(ಜಲ್ಸಗೆ ಸಂಬಂಧಪಟ್ಟು ಹುಝೂರ್ ಖುತ್ಬದ ಕೊನೆಯಲ್ಲಿ ಹೀಗೆ ಹೇಳಿದರು:) ಜಲ್ಸದಲ್ಲಿ ಮಹಿಳೆಯರು ತಿಳಿವಳಿಕೆ ಇರುವ ಮಕ್ಕಳೊಡನೆ ಕಾರ್ಯಕ್ರಮಗಳನ್ನು ಆಲಿಸಬೇಕೆಂದು ತಿಳಿ ಹೇಳಬೇಕು. ಅದೇ ರೀತಿಯಲ್ಲಿ ಸುರಕ್ಷೆಗೆ ಸಂಬಂಧಪಟ್ಟು ಆಸುಪಾಸಿನ ಗಮನವಿರಬೇಕು. ಕಾರ್ಯಕ್ರಮದಲ್ಲಿ ಬರೆಯಲಾಗಿರುವ ನಿರ್ದೇಶನಗಳನ್ನು ಪಾಲಿಸಬೇಕು. ಅಲ್ಲಾಹನು ಎಲ್ಲ ತೊಂದರೆಗಳಿಂದ ಸಂರಕ್ಷಿಸಲಿ. ತನ್ನ ಕೃಪೆ ಮತ್ತು ಕಾರುಣ್ಯದ ಮಳೆ ವರ್ಷಿಸುತ್ತಾ ಇರಲಿ.

*****

اَلْحَمْدُلِلّٰہِ نَحْمَدُہٗ وَنَسْتَعِیْنُہٗ وَنَسْتَغْفِرُہٗ وَنُؤْمِنُ بِہٖ وَنَتَوَکَّلُ عَلَیْہِ وَنَعُوْذُ بِاللّٰہِ
مِنْ شُرُوْرِ اَنْفُسِنَا وَمِنْ سَیِّئَاتِ اَعْمَالِنَا مَنْ یَّھْدِہِ اللّٰہُ فَلَا مُضِلَّ لَہٗ وَمَنْ یُّضْلِلْہُ
فَلَاھَادِیَ لَہٗ ۔ وَنَشْھَدُ اَنْ لَّآ اِلٰہَ اِلَّا اللّٰہُ وَنَشْھَدُاَنَّ مُحَمَّدًا عَبْدُہٗ وَرَسُوْلُہٗ
عِبَادَ اللّٰہِ رَحِمَکُمُ اللّٰہُ اِنَّ اللّٰہَ یَأْمُرُ بِالْعَدْلِ وَالْاِحْسَانِ وَاِیْتَاءِ ذِی الْقُرْبٰی
وَیَنْھٰی عَنِ الْفَحْشَآءِ وَالْمُنْکَرِ وَالْبَغْیِ یَعِظُکُمْ لَعَلَّکُمْ تَذَکَّرُوْنَ ۝ اُذْکُرُوا اللّٰہَ
یَذْکُرْکُمْ وَادْعُوْہُ یَسْتَجِبْ لَکُمْ وَلَذِکْرُ اللّٰہِ اَکْبَرُ۔

***Friday Sermon delivered by Hadrath Khaleefatul Masih Al Khamis***(*atba*)

At, **'Hadeeqatul Mahdi'**, London, U.K, On 28-07-2023

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim |***Layout****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian

***Email****:* *khutuba.kannada@gmail.com*

**You can find all the Sermons archived at**: www.alislam.org/friday-sermon